ವಿಶ್ವವಾಣಿ
23.06.2022 ಗುರುವಾರ
vishwavani.news

ನಿತ್ಯದ ವಿಂಡೋ ಶಾಪಿಂಗ್

# ಅವೆನ್ಯೂ ರೋಡ್

## ದಿನ ದರ್ಶಿಕೆ

ಸಂವತ್ಸರ: ಶುಭಕೃತ್. ಆಯನ: ಉತ್ತರಾಯಣ. ಋತು: ಗ್ರೀಷ್ಮ. ಮಾಸ: ಜ್ಯೇಷ್ಠ. ಮಾಸ ನಿಯಾಮಕ: ಶ್ರೀರಮಾತ್ರಿವಿಕ್ರಮ. ಪಕ್ಷ: ಕೃಷ್ಣ. ತಿಥಿ: ದಶಮೀ. ನಕ್ಷತ್ರ: ರೇವತೀ. ಯೋಗ: ಶೋಭನ. ಕರಣ: ವಣಿಕ್. ಸೂರ್ಯೋದಯ: 05.55. ಸೂರ್ಯಾಸ್ತ: 07.03. ರಾಹು ಕಾಲ: ಮಧ್ಯಾಹ್ನ 01:30 ರಿಂದ 03:00 ರವರೆಗೆ.

## ದಿನ ಭವಿಷ್ಯ

**ಮೇಷ** ದೂರದ ದೇಶಕ್ಕೆ ಸಂಚಾರ ಮಾಡುವ ಯೋಗ ನಿಮ್ಮದಾಗಬಹುದು. ಉತ್ತಮ ದಿನವಾಗಿರಲಿದೆ.

**ವೃಷಭ** ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುವುದು ಸಂದೇಹ. ಸಿಟ್ಟು ನಿಗ್ರಹಿಸಿದರೆ ಕುಟುಂಬದಲ್ಲಿ ಶಾಂತಿ ನೆಲೆಸುತ್ತದೆ.

**ಮಿಥುನ** ಧ್ಯಾನ ಮತ್ತು ಪ್ರಾಣಾಯಾಮದಿಂದ ಮಾಡಿ. ಅದರಿಂದ ಮನಸ್ಸು ನಿರಾಳವಾಗುತ್ತದೆ. ಚಿಂತಿಸುವ ಅಗತ್ಯವಿಲ್ಲ.

**ಕಟಕ** ಅಂದುಕೊಂಡ ಕಾರ್ಯ ಸರಾಗವಾಗಿ ಜರುಗಲಿದೆ. ಪ್ರಯತ್ನಕ್ಕೆ ತಕ್ಕ ಪ್ರತಿಫಲ ದೊರಯಲಿದೆ. ಉತ್ತಮ ದಿನ.

**ಸಿಂಹ** ಇಂದು ಮಾಡಿದ ಹೂಡಿಕೆಯು ಸಮೃದ್ಧಿ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ.

**ಕನ್ಯಾ** ಊಹಾಪೋಹಗಳು ಲಾಭ ತರುವುದಿಲ್ಲ. ಕುಟುಂಬ ಸದಸ್ಯರೊಂದಿಗೆ ಪುಣ್ಯಕ್ಷೇತ್ರಕ್ಕೆ ಭೇಟಿ ಸಾಧ್ಯತೆ.

**ತುಲಾ** ಊಹಾಪೋಹಗಳು ಲಾಭ ತರುವುದಿಲ್ಲ. ಕುಟುಂಬ ಸದಸ್ಯರೊಂದಿಗೆ ಪುಣ್ಯ ಸ್ಥಳಕ್ಕೆ ಭೇಟಿ ನೀಡಬಹುದು.

**ವೃಶ್ಚಿಕ** ನೀವು ಇಂದು ಆರ್ಥಿಕ ಪ್ರಯೋಜನಗಳನ್ನು ಪಡೆಯುವ ಸಾಧ್ಯತೆಯಿದೆ. ದಾನವನ್ನು ಮಾಡಬೇಕು.

**ಧನು** ಮಕ್ಕಳಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆಯಿದೆ. ಇದರಿಂದ ತುಂಬಾ ಸಂತೋಷವಾಗುತ್ತದೆ.

**ಮಕರ** ಹಲ್ಲು ಅಥವಾ ಹೊಟ್ಟೆ ನೋವು ನಿಮಗೆ ಕೆಲವು ಸಮಸ್ಯೆಗಳನ್ನು ಉಂಟುಮಾಡಬಹುದು. ವೈದ್ಯರನ್ನು ಕಾಣಿ.

**ಕುಂಭ** ಹಣದ ಸ್ಥಿತಿ ಸುಧಾರಿಸುತ್ತದೆ. ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವುದರಿಂದ ಮನಸ್ಸಿಗೆ ಸಮಾಧಾನ ಸಿಗುತ್ತದೆ.

**ಮೀನ** ಹೊಸ ಭರವಸೆ ಮತ್ತು ಕನಸುಗಳು ಹುಟ್ಟಬಹುದು. ನಿಮ್ಮ ಕನಸು ಈಡೇರಲು ಸ್ವಂತ ಪ್ರಯತ್ನಗಳು ಅಗತ್ಯ.

● ಕೆ.ಬಿ.ಸಂತೋಷ್ ಗುರೂಜಿ



ಘನಶ್ಯಾಮ ಹೌಸ್: ಅಸ್ಸಾಂ ರಾಜ್ಯದ ಜೋಯ್‌ಸಾಗರದಲ್ಲಿರುವ ಈ ಘನಶ್ಯಾಮ ಹೌಸ್‌ನ್ನು 17ನೇ ಶತಮಾನದಲ್ಲಿ ರಾಜ ರುದ್ರ ಸಿಂಗರು ಕಟ್ಟಿಸಿದ್ದರು.

## ನಮ್ಮ ಪ್ರತಿನಿಧಿಗಳು ಹೇಗಿರಬೇಕು?

ಭಾರತ ಗಣರಾಜ್ಯ, ಅರ್ಥಾತ್ ಪ್ರಜಾಪ್ರಭುತ್ವ ದೇಶ. ಇನ್ನೂ ಬಿಡಿಸಿ ಹೇಳುವುದಾದರೆ, ಪ್ರಜೆಗಳಿಂದಲೇ ಆಯ್ಕೆಗೊಂಡು, ನಾಯಕನೆಂಬ ಬಿರುದು ಪಡೆದು ನಾಯಕತ್ವವನ್ನೇ ಚಲಾಯಿಸುವ ಜನಪ್ರಿಯ ನಾಯಕರ ಜನಾಡಳಿತ ದೇಶ, ನಮ್ಮ ಭಾರತ. ಇದು ವ್ಯಂಗ್ಯವೋ ಅಥವಾ ಕಿಂಚಿತ್ ಸತ್ಯವೂ ಇದೆಯೋ ಇದರಲ್ಲಿ ಎಂಬ ಗೊಂದಲ ಸಹಜವಾಗಿ ಬರುತ್ತದೆ. ಯಾವಾಗ ಅಥವಾ ಎಲ್ಲಿಯವರೆಗೆ ರಾಜಕೀಯ ಪಕ್ಷಗಳ ಮತ್ತು ಅವುಗಳ ನಾಯಕರುಗಳ ಉದ್ದೇಶ ತಮ್ಮನ್ನು ಆರಿಸಿದ ಪ್ರಜೆಗಳ ಸೇವೆ ಮಾತ್ರವೇ ಆಗಿರುತ್ತದೋ ಅಲ್ಲಿಯವರೆಗೆ ಪ್ರಜಾಪ್ರಭುತ್ವ (Democracy) ಎತ್ತರದ ಚುಕ್ಕಾಣಿಯಲ್ಲಿರುತ್ತದೆ. ಇವು ಕೇವಲ ಸೈದ್ಧಾಂತಿಕ, ಇವೆಲ್ಲ ಪುಸ್ತಕದಲ್ಲೇ ಚೆನ್ನ ಎಂದು ಎಲ್ಲರಿಗೂ ಅನಿಸುತ್ತದೆ. ಆದರೆ ಒಂದು ಈಥಿಇಟ್ಟಚಿಚಿಜ್ಜಿ ದೇಶದ ಮುಖ್ಯ ಗುಣಲಕ್ಷಣವೇ ಅದು ಎಂದು ಪ್ರಜೆಗಳು ಸ್ಮರಿಸಬೇಕು. ಎಲ್ಲ ರಾಜಕೀಯ ಪಕ್ಷಗಳೂ ರಾಮರಾಜ್ಯದ ಮಾತಾಡುತ್ತಾರೆ ಆದರೆ ರಾಮನ ಆಡಳಿತ ವೈಖರಿ ಯಾರಿಗೂ ಬೇಡ. ಮಹಾಭಾರತ, ಗೀತೆ ಎಂದು ಭಾಷಣ ಕೊಡುವವರೇ ಎಲ್ಲ; ಕೃಷ್ಣನ ಸದುದ್ದೇಶ ಭರಿತ ತಂತ್ರಗಳು ಬುದ್ಧಿಮಾತುಗಳು ಯಾರಿಗೂ ಬೇಕಿಲ್ಲ. ಪ್ರಜೆಗಳನ್ನು ಪ್ರತಿನಿಧಿಸುವ ಪ್ರಭು ಹೇಗಿರಬೇಕು ಎಂಬುದನ್ನು ಆಚಾರ್ಯ ಚಾಣಕ್ಯರು ಬಲು ಸುಂದರವಾಗಿ ನಮ್ಮ ಮುಂದಿಡುತ್ತಾರೆ: ನಾತ್ಮಪ್ರೀಯಂ ಹಿತಂ ರಾಜ್ಞಃ, ಪ್ರಜಾನಾಂತು ಪ್ರಿಯಂ ಹಿತಂ, ಅರ್ಥ ಇಷ್ಟೇ: ಆಳುಗರಿಗೆ ಸ್ವಂತ ಪ್ರಿಯವೆಂಬುದಿಲ್ಲ, ಪ್ರಜೆಗಳ ಪ್ರಿಯವೇ ಅವರ ಹಿತ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳನ್ನು ಪ್ರತಿನಿಧಿಸುವ ಪ್ರಭುವಿನ ಮುಖ್ಯ 'ಗುಣಲಕ್ಷಣ' ಇದು. ಸ್ವಹಿತವನ್ನು ಬದಿಗಿರಿಸಿ ನಾಡಿನ ಸಮಸ್ತ ಜೀವಿಗಳನ್ನೂ ಸ್ವಜನರೆಂದೇ ಭಾವಿಸಿ, ಅರಿತು ಯಾರು ಕಾರ್ಯಭಾರ ಮಾಡಬಲ್ಲನೋ ಅಂತಹವನನ್ನು ಜನ ಯೋಗ್ಯ ಆಡಳಿತಗಾರ ಎಂದು ಹಿಂದೆಯೂ ಗುರುತಿಸಿದ್ದಾರೆ ಮುಂದೆಯೂ ಹಾಗೆಯೇ ಮಾಡುತ್ತಾರೆ.



● ಹೃತಿಕ್ ಕುಲಕರ್ಣಿ

## ಇದು ಒಮ್ಮುಖದ ಒಲವು

ಪ್ರೀತಿ ಎಂಬ ವಿಷಯದಲ್ಲಿ ಜೋಡಿಗಳು ಪ್ರೀತಿಮಾಡಿ ಸೋತ ನಂತರ ಉಂಟಾಗುವ ನೋವಿಗಿಂತ ಅತ್ಯಂತ ಯಾತನಾಮಯ ಅಧ್ಯಾಯವೆಂದರೆ ಈ ಒಮ್ಮುಖ ಒಲವು. ಹೀಗೆನ್ನುವುದಕ್ಕಿಂತ ಒನ್ ಸೈಡ್ ಲವ್ ಎಂದರೆ ಎಲ್ಲರಿಗೂ ಅರ್ಥವಾಗುತ್ತೆ. ಹೌದು, ಅವಳನ್ನು ನಾನು ಪ್ರೀತಿಸುತ್ತಿದ್ದೇನೆ! ಎಂದು ನಿರ್ಧರಿಸಿದ ನಂತರವೂ ಸಹ ಯಾಕೆ ಪ್ರೀತಿಸುತ್ತಿದ್ದೇನೆ? ಅವಳೂ ನನ್ನನ್ನ ಇಷ್ಟಪಡುತ್ತಾಳಾ? ಅವಳೇನಾದರೂ ಒಪ್ಪದೇ ಹೋದರೆ ಮುಂದೇನು? ಎಂಬ ಪ್ರಶ್ನೆಗಳನ್ನು ಹೊತ್ತು ಬದುಕುತ್ತಿರುವ ಜೀವವೆಂದರೆ ಅದು ಒಮ್ಮುಖದ ಒಲವಿನ ಜೀವ.



ಒಬ್ಬ ಹುಡುಗ ಕಾಲೇಜ್ ದಿನಗಳಲ್ಲಿ ಮುದ್ದೆನಿಸುವ ಅವಳ ಮುಖ, ಸೆಳೆಯುವ ಮುಗುಳ್ನಗು, ಹಿತವಾದ ಮಾತು ಇವನ್ನೆಲ್ಲ ಮತ್ತೆ ಮತ್ತೆ ನೋಡುತ್ತಾ ತಾನವಳನ್ನ ಪ್ರೀತಿಸುತ್ತಿದ್ದೇನೆ ಎನ್ನುವ ನಿರ್ಧಾರಕ್ಕೆ ಬರುತ್ತಾನೆ. ಹಾಗೆ ನಿರ್ಧರಿಸುವುದಕ್ಕೆ ಅವಳ ಒಪ್ಪಿಗೆಯೇನೂ ಬೇಕಿಲ್ಲವಲ್ಲ! ಆದರೆ ಆ ಪ್ರೀತಿಯನ್ನು ಪಡೆಯಬೇಕೆಂದಾಗಲೇ ಶುರುವಾಗುವುದು ನಿಜವಾದ ಒದ್ದಾಟ.

ಹುಡುಗಿಯ ಎದುರಿಗೆ ಹೋಗಿ ತನ್ನ ಪ್ರೇಮ ನಿವೇದನೆ ಹಂಚಿಕೊಳ್ಳಬೇಕು ಎನ್ನಿಸಿದಾಗಲೆಲ್ಲ ಒಂದು ವೇಳೆ ಅವಳ ಭಾವನೆಯಲ್ಲಿ ತನ್ನ ಕುರಿತು ಪ್ರೀತಿ ಇಲ್ಲದಿದ್ದರೆ? ಆಗ ಇಲ್ಲದ ಪ್ರೀತಿಯನ್ನ ಪಡೆಯಲು ಹೋಗಿ ಈಗ ಇರುವ ಕನಿಷ್ಟ ಸ್ನೇಹವನ್ನೂ ಕಳೆದುಕೊಳ್ಳಬೇಕಾಗುತ್ತದೆ ಎಂಬ ಭಯದಲ್ಲಿ ಒಳಗೊಳಗೆ ಒದ್ದಾಡುತ್ತಾನೆ. ಇನ್ನೂ ಕೆಲವೊಮ್ಮೆ ತಾನು ಹೀಗಿರದೇ ಹಾಗಿದ್ದಿದ್ದರೆ ಅವಳು ಇಷ್ಟಪಡುವಳೊ ಏನೋ ಎಂಬುದೆಲ್ಲ ಅಸಂಬದ್ಧವಾದರು ಮನಸ್ಸು ಹೀಗೊಮ್ಮೆ ಪ್ರಯತ್ನಿಸಲು ಯೋಚಿಸುತ್ತದೆ. ಆದರೆ, ಇದ್ದುದ್ದನ್ನ ಇದ್ದಂತೆಯೇ ಇಷ್ಟಪಡುವುದೇ ನಿಜವಾದ ಪ್ರೀತಿ ಅಲ್ಲವೇ.

ತನ್ನ ಈ ಪ್ರೇಮಲೋಕದ ಕನಸುಗಳು ನನಸಾಗುವುದಿಲ್ಲವೆಂದು ಗೊತ್ತಿದ್ದರೂ ಸಹ ಬದುಕುತ್ತಾರಲ್ಲ, ಬಹುಷಃ ಇದರಂತಹ ನೋವು ಮತ್ತೊಂದಿಲ್ಲ. ಹೌದು, ಇಂದಲ್ಲ ನಾಳೆ ಅವಳು ತನನ್ನು ಒಪ್ಪುವ ದಿವ್ಯ ಘಳಿಗೆಯೊಂದು ಬಂದೀತೆಂಬ ಕುಟುಕು ಆಸೆಯೊಂದನ್ನ ಹೊತ್ತು ಯಾವುದೋ ಪವಾಡವೊಂದು ನಡೆಯಬಹುದೆಂಬ ಸಣ್ಣ ಕನಸೊಂದು ಉಳಿದಿರುತ್ತದಲ್ಲಾ, ಅದೇ ಮನಸ್ಸಿನ ವೇದನೆಗಳ ಮೂಲ. ಆ ಆಸೆ ಪ್ರತಿ ಬಾರಿಯೂ ಪೆಟ್ಟು ತಿನ್ನುತ್ತಲೇ ಇರುತ್ತದೆ, ಮತ್ತೆ ಏಳುತ್ತಲೇ ಇರುತ್ತದೆ.

ಆದರೆ, ಅವಳು ಮಾತ್ರ ಇದ್ಯಾವುದರ ಅರಿವೇ ಇಲ್ಲದಂತಿರುತ್ತಾಳೆ. ಪಾಪ ಇದರಲ್ಲಿ ಅವಳದು ತಪ್ಪಿಲ್ಲ ಬಿಡಿ. ಏಕೆಂದರೆ ಅವನು ಅವಳನ್ನು ಮನಸ್ಸಿನಲ್ಲಿಯೇ ಪ್ರೇಮಿಸುವ ವಿಷಯ ಅವಳಿಗೆ ತಿಳಿಯುವುದಾದರೂ ಹೇಗೆ?

ಅಷ್ಟಕ್ಕೂ ಪ್ರೀತಿಗೆ ಬದಲಾಗಿ ಪ್ರೀತಿಯೇ ದೊರೆಯಬೇಕೆಂದೂನೂ ಇಲ್ಲವಲ್ಲ. ಪ್ರಯತ್ನಕ್ಕೆ ತಕ್ಕ ಪ್ರತಿಫಲವನ್ನು ಕೇಳುವುದಕ್ಕೆ ಇದೇನೂ ವ್ಯವಹಾರವಲ್ಲ. 'ಅವಳೆಂದರೆ ನನಗಿಷ್ಟ, ಪ್ರೀತಿಸುತ್ತೇನೆ. ನನ್ನನ್ನ ಇಷ್ಟಪಡುವುದು, ಬಿಡುವುದು ಅವಳಿಗೆ ಬಿಟ್ಟ ವಿಷಯ' ಅಂದುಕೊಂಡು ಪ್ರೀತಿಸಲಿಕ್ಕಾಗುವುದಿಲ್ಲವಾ? ಪರಿಶುದ್ಧವಾದ ಪ್ರತಿಯೊಂದು ಪ್ರೇಮವೂ ಇಂದಲ್ಲ ನಾಳೆ, ಯಾವುದೋ ಒಂದು ರೂಪದಲ್ಲಿ ಸಾಕ್ಷಾತ್ಕಾರವಾಗಿಯೇ ತೀರುತ್ತದೆಂಬ ಸಣ್ಣ ನಂಬಿಕೆಯೊಂದಿದ್ದರೆ ಸಾಲದೇ?

ಒಮ್ಮುಖ ಒಲವೆನ್ನುವುದೊಂದು ಪವಿತ್ರವಾದ ಭಾವನೆ. ಇಲ್ಲಿ ಅಸಂಖ್ಯ ನೋವುಗಳ ನಡುವೆಯೂ ವಿವರಿಸಲಾಗದ ಸಾರ್ಥಕತೆಯೊಂದಿದೆ. ಎಂದೆಂದಿಗೂ ತನ್ನವರಾಗದ ವ್ಯಕ್ತಿಯೊಬ್ಬರ ನೋವು, ನಲಿವುಗಳಿಗೆ ಮಿಡಿಯುವ, ಅವರು ಸದಾ ಖುಷಿಯಾಗಿರಲೆಂದು ಹಾರೈಸುವ ಉದಾತ್ತ ಪ್ರೇಮವಿದೆ. ಗೆಲುವು, ಸೋಲುಗಳಾಚೆಗೆ ಆ ಪ್ರೀತಿಯನ್ನು ಆರಾಧಿಸುವ ನಿರ್ಮಲ ಮನಸ್ಸಿದೆ. ಪ್ರೀತಿಸಿ ಸೋತಿದ್ದೆವೆ, ಇರಲಿ, ಇದು ದ್ವೇಶಿಸಿ, ಮೋಸಮಾಡಿ ಗೆಲ್ಲುವಷ್ಟು ಕೆಟ್ಟದ್ದೇನೂ ಅಲ್ಲವಲ್ಲ?!

● ರುದ್ರಯ್ಯ ಎಸ್.ಎಸ್



## ವಿಶ್ವದಾಖಲೆ

### ಹೆಡ್‌ಸ್ಟ್ಯಾಂಡ್ ಡ್ರೈವಿಂಗ್

31 ವರ್ಷದ ಮಾರ್ಕೊ ಜಾರ್ಜ್ ಎಂಬ ವ್ಯಕ್ತಿ ಗಂಟೆಗೆ 122.59 ಕಿ.ಮೀ ವೇಗದಲ್ಲಿ ತಲೆಕೆಳಗೆ ಮಾಡಿ ಬೈಕ್ ಚಲಾಯಿಸುವ ಮೂಲಕ ಅತೀ ವೇಗದ ಹೆಡ್‌ಸ್ಟಾಂಡ್ ಬೈಕ್ ಚಲಾವಣೆಯಲ್ಲಿ ವಿಶ್ವದಾಖಲೆ ಬರೆದಿದ್ದಾರೆ.

- ತಾರೆಗಳು ತಲೆಕೆಳಗೆ ಮಾಡಿ ನೋಡುತಿಹವು ನಾವು ತಲೆ ಎತ್ತೇವೆ?
- ದಿನಗಳೆದು ಮನವರಳಿ ಮತ್ತದು ಮುದದಿ ಸದ್ದುಗುದ್ದಾಗುತಿಹದು.
- ಟಾಕಾರದಿಂದ ಆ ಇಕಾರಹೊಮ್ಮಿ ಜಕಾರದಿಂದ ಝೇಂಕಾರ ಹೊಮ್ಮಿಹುದು.



## ಇತಿಹಾಸದ ಈ ದಿನ



- ಕ್ರಿ.ಶ. 930 – ವಿಶ್ವದ ಅತ್ಯಂತ ಹಳೆಯ ಸಂಸತ್ತು, ಆಲ್ಥಿಂಗ್ ಅನ್ನು ಐಸ್ಲ್ಯಾಂಡ್‌ನಲ್ಲಿ ಸ್ಥಾಪಿಸಲಾಗಿತ್ತು.
- ಕ್ರಿ.ಶ. 1868 – ಕ್ರಿಸ್ಟೋಫರ್ ಲ್ಯಾಥಮ್ ಶೋಲ್ಸ್ ಟೈಪ್-ರೈಟರ್ ಆವಿಷ್ಕಾರಕ್ಕೆ ಪೇಟೆಂಟ್ ಪಡೆದಿದ್ದರು.
- ಕ್ರಿ.ಶ. 1894 – ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯನ್ನು ಸ್ಥಾಪಿಸಲಾಗಿತ್ತು.
- ಕ್ರಿ.ಶ. 1927 – ಆಲ್ ಇಂಡಿಯಾ ರೇಡಿಯೋ ಬ್ರಾಡ್‌ಕಾಸ್ಟಿಂಗ್ ಸೇವೆ ಪ್ರಾರಂಭಿಸಿತ್ತು.
- ಕ್ರಿ.ಶ. 1961 ಅಂಟಾರ್ಕ್ಟಿಕ್ ಒಪ್ಪಂದ ವ್ಯವಸ್ಥೆ ಜಾರಿಗೆ ಬಂದಿತ್ತು.
- ಕ್ರಿ.ಶ. 1980 – ಅಂದಿನ ಪ್ರಧಾನಿ ಇಂದಿರಾ ಗಾಂಧಿ ಮಗ ಸಂಜಯ್ ಗಾಂಧಿ ವಿಮಾನ ಅಪಘಾತದಲ್ಲಿ ನಿಧನರಾಗಿದ್ದರು.

## ಇವರು ನಿಮಗೆ ಗೊತ್ತೇ?

### ಬಟುಕೇಶ್ವರ್ ದತ್(1910–1965)



ಇವರು ಭಾರತೀಯ ಕ್ರಾಂತಿಕಾರಿ ಮತ್ತು ಸ್ವಾತಂತ್ರ್ಯ ಹೋರಾಟಗಾರ. 8 ಏಪ್ರಿಲ್ 1929ರಂದು ದೆಹಲಿಯ ಸೆಂಟ್ರಲ್ ಲೆಜಿಸ್ಲೇಟಿವ್ ಅಸೆಂಬ್ಲಿಯಲ್ಲಿ ಭಗತ್ ಸಿಂಗ್ ಜೊತೆ ಎರಡು ಬಾಂಬ್‌ಗಳನ್ನು ಸ್ಫೋಟಿಸಿದ್ದಕ್ಕೆ ಹೆಸರುವಾಸಿ ಯಾಗಿದ್ದಾರೆ. ಬ್ರಿಟಿಷ್ ಸರಕಾರ ಇವರನ್ನು ಬಂಧಿಸಿ ಜೀವಾ ವಧಿ ಶಿಕ್ಷೆಗೆ ಒಳಪಡಿಸಿತು. ನಂತರ ಇವರು ಜೈಲಿನಲ್ಲೇ ಐತಿಹಾ ಸಿಕ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದರು ಮತ್ತು ಭಾರತೀಯ ಖೈದಿಗಳಿಗೆ ಹಲವಾರು ಹಕ್ಕುಗಳನ್ನು ಒದಗಿಸಿಕೊಟ್ಟರು.

## ಸವಿಸವಿ ನೆನಪು, ಸಾವಿರ ನೆನಪು

### ವಿಪಾಸನಾ ಧ್ಯಾನದಿಂದ ಕೈದಿಗಳ ಮನಃಪರಿವರ್ತನೆ

ಜೈಲುಗಳೆಂದರೆ ಮುಗಿದೇ ಹೋಯಿತು. ಕಚಡಾ ಸ್ಥಳಗಳು ಎಂಬ ಕುಖ್ಯಾತಿಗೆ ಪಾತ್ರವಾಗಿದ್ದ ಕಾಲವದು. ಅಂತಹ ಕಾರಾಗ್ರಹಗಳ ಅಭಿವೃದ್ಧಿಗೆ ಈ ಮಹಿಳಾ ಪೊಲೀಸ್ ಅಧಿಕಾರಿ ನಾಂದಿ ಹಾಡಿದರು. ಅಲ್ಲಿನ ವ್ಯವಸ್ಥೆಯನ್ನು ಬದಲಿಸಿದ್ದಲ್ಲದೇ ಅಪರಾಧಿಗಳ, ಕೈದಿಗಳ ಮನಃಪರಿವರ್ತನೆಗಾಗಿ 'ವಿಪಾಸನಾ' ಧ್ಯಾನವೆಂಬ ನಿರಂತರ ಕಾರ್ಯವನ್ನು ಕೈಗೊಂಡರು. ಈ ವಿಪಾಸನಾ ಧ್ಯಾನದ ಕುರಿತು ಹಲವು ಸಂಶೋಧನೆಗಳು ನಡೆದವು. ಪ್ರತಿನಿತ್ಯ ಒಂದು ಸಾವಿರಕ್ಕೂ ಹೆಚ್ಚು ಜನ ಕೈದಿಗಳು ಈ ಧ್ಯಾನದಲ್ಲಿ ಪಾಲ್ಗೊಳ್ಳುತ್ತಿದ್ದರು.

ಅಪರಾಧಿಗಳ ಮನಸ್ಸಿನ ಮೇಲೆ ಈ ಧ್ಯಾನ ಗಾಢವಾದ ಪರಿಣಾಮ ಬೀರಿತು. ಇದರಿಂದ ನಾವೊಬ್ಬ ಮನುಷ್ಯರಾಗಿದ್ದೇವೆ ಎಂದು ಕೈದಿಗಳೇ ಒಪ್ಪಿಕೊಂಡುಬಿಟ್ಟರು. ಹೀಗೆಂದು ವಿಪಾಸನಾ ಕಾರ್ಯಕ್ರಮವನ್ನು ವೈಜ್ಞಾನಿಕವಾಗಿ ಸಂಶೋಧಿಸಿ, ವಿಶ್ಲೇಷಿಸಿ ಹಿರಿಯ ನಿವೃತ್ತ ಪೊಲೀಸ್ ಅಧಿಕಾರಿ ತರ್ಸೆಮ್ ಕುಮಾರ್ ತಮ್ಮ 'ಫ್ರೀಡಮ್ ಬಿಹೈಂಡ್ ಬಾರ್ಸ್' ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ. ಹಾಗಾದರೆ ಈ ವಿಪಾಸನಾ ಧ್ಯಾನವನ್ನು ತಿಹಾರ್ ಜೈಲಿನಲ್ಲಿ ಪ್ರಸ್ತುತಪಡಿಸಿ, ಅಪರಾಧಿಗಳ ಮನಃಪರಿವರ್ತನೆ ಮಾಡಿದ ಆ ಕೆಚ್ಚೆದೆ ಮಹಿಳಾ ಪೊಲೀಸ್ ಅಧಿಕಾರಿಯೇ ನಮ್ಮ ಕಿರಣ್ ಬೇಡಿ. ಕಠಿಣ ಪರಿಶ್ರಮ ಎಂದೂ ನಿರರ್ಥಕವಾಗುವುದಿಲ್ಲ ಎಂದು ಹೇಳುವ ಕಿರಣ್ ಬೇಡಿ ಸಾಧಿಸುವ ಮಹಿಳೆಯರಿಗೆ ಒಂದು ದಾರಿದೀಪವಿದ್ದಂತೆ.



● ಎಲ್.ಪಿ.ಕುಲಕರ್ಣಿ

## ರಸಪ್ರಶ್ನೆಗಳು

1. ಸೂರ್ಯನಿಗೆ ಹತ್ತಿರವಿರುವ ನಕ್ಷತ್ರ ಯಾವುದು?
2. ಭೂಗೋಳ ಶಾಸ್ತ್ರದ ಪಿತಾಮಹ ಯಾರು?
3. ಏಷ್ಯಾದಲ್ಲೇ ಮೊದಲ ಬಾರಿಗೆ ಮಂಗಳಯಾನ ಕೈಗೊಂಡ ಸಂಸ್ಥೆ ಯಾವುದು?
4. ಅತಿ ಕಡಿಮೆ ಸಾಂದ್ರತೆ ಹೊಂದಿರುವ ಗ್ರಹ ಯಾವುದು?
5. ವಿಶ್ವದ ಉಗಮ ಸ್ಥಿತಿ ಬಗ್ಗೆ ತಿಳಿಸುವ ವಿಜ್ಞಾನ ಯಾವುದು?
6. ಅಂತಾರಾಷ್ಟ್ರೀಯ ಕಾಲಮಾನಕ್ಕಿಂತ ಭಾರತದ ಕಾಲಮಾನ ಎಷ್ಟು ಗಂಟೆ ಮುಂದಿದೆ ?
7. ಅತಿ ಹೆಚ್ಚು ಪರಿಭ್ರಮಣ ಅವಧಿಯನ್ನು ಹೊಂದಿರುವ ಗ್ರಹ ಯಾವುದು?
8. ಸೂರ್ಯನಲ್ಲಿರುವ ಜಲಜನಕ ಪ್ರಮಾಣ ಎಷ್ಟು?
9. ಭೂಮಿಯು ಸೂರ್ಯನಿಗಿಂತ ಎಷ್ಟರಷ್ಟು ಚಿಕ್ಕದಾಗಿದೆ?
10. ಸೂರ್ಯನ ಬೆಳಕು ಭೂಮಿಯನ್ನು ತಲುಪಲು ಎಷ್ಟು ನಿಮಿಷ ಬೇಕು?

**ಉತ್ತರಗಳು**
1. ಪ್ರಾಕ್ಸಿಮಾ ಸೆಂಟಾರಿ 2. ಎರಟೋಸ್ತನೀಸ್ 3. ಇಸ್ರೋ 4. ಶನಿ 5. ಕಾಸ್ಮಾಲಜಿ 6. 5.1/2 ಗಂಟೆ 7. ನೆಪ್ಚ್ಯೂನ್ 8. 71% 9. 107% 10. 8.3 ನಿಮಿಷ

## ಸೌಂದರ್ಯ ಸೂತ್ರ



### ತುಳಸಿ ಲಿಂಬೆ ರಸ

ತುಳಸಿ ಲಿಂಬೆಹಣ್ಣಿನ ರಸದೊಂದಿಗೆ ರುಬ್ಬಿ ಅದಕ್ಕೆ ಆರರಿಂದ ಎಂಟು ಹನಿ ಜೇನುತುಪ್ಪವನ್ನುಬೆರೆಸಿ ಮೊಡವೆಗೆ ಹಚ್ಚಿದರೆ ಮೊಡವೆಗಳು ಮಾಯವಾಗುತ್ತವೆ. ಮುಖದ ಕಾಂತಿಯನ್ನೂ ಇದು ಹೆಚ್ಚಿಸುತ್ತದೆ.

## ಸೌಟೌಟ್

### ಹೊಸ ಥರದ ಬದನೆಕಯಿ ಬಜ್ಜಿ

**ಬೇಕಾಗುವ ಸಾಮಗ್ರಿಗಳು:**
ಕಡ್ಲೆಹಿಟ್ಟು – ಒಂದು ಬಟ್ಟಲು, ಅಕ್ಕಿಹಿಟ್ಟು – ಎರಡು ಚಮಚ, ಅಚ್ಚಖಾರದ ಪುಡಿ, ಉಪ್ಪು, ಓಮಕಾಳು, ಕಾದ ಎಣ್ಣೆ – ಒಂದು ಚಮಚ, ಚಿಟಿಕೆ ಸೋಡ, ಕಲೆಸಲು ಬೇಕಾಗುವಷ್ಟು ನೀರು, ಕರಿಯಲು ಎಣ್ಣೆ

**ತಯಾರಿಸುವ ವಿಧಾನ:**
ಬದನೆಕಾಯಿಯನ್ನು ತೆಳುವಾಗಿ ಹೆಚ್ಚಿಕೊಂಡು ಸ್ವಲ್ಪ ಉಪ್ಪು ಹಾಕಿದ ನೀರಿನಲ್ಲಿ ಹಾಕಿಡಿ. ಕಡ್ಲೆಹಿಟ್ಟು, ಅಕ್ಕಿಹಿಟ್ಟು, ಓಮಕಾಳು,ಉಪ್ಪು, ಅಚ್ಚಖಾರದ ಪುಡಿ ಮತ್ತು ಸೋಡ ಹಾಕಿ ಚೆನ್ನಾಗಿ ಬೆರೆಸಿ, ಅದಕ್ಕೆ ಕಾದಿರುವ ಎಣ್ಣೆ ಹಾಕಿ, ಜೊತೆಯಲ್ಲಿ ನೀರು ಹಾಕಿ, ಕಲೆಸಿಕೊಳ್ಳಿ, ಎಲ್ಲವನ್ನು ಚೆನ್ನಾಗಿ ಬೆರೆಸಿ ದೋಸೆ ಹಿಟ್ಟಿನ/ಬಜ್ಜಿಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ಎಣ್ಣೆಯ ನ್ನು ಕಾಯಲು ಇಟ್ಟು, ಅದು ಕಾದ ನಂತರ, ಹೆಚ್ಚಿರುವ ಬದನೆಕಾಯಿ ಯನ್ನು ಕಲೆಸಿರುವ ಹಿಟ್ಟಿನಲ್ಲಿ ಅದ್ದಿ, ಕಾದಿ ರುವ ಎಣ್ಣೆಯಲ್ಲಿ ಅದನ್ನು ತೇಲಿಬಿಡಿ. ಅದು ಮೇಲೆ ಬಂದಾಗ ತಿರುವಿ ಹಾಕಿ, ಎರಡು ಬದಿಯೂ ಚೆನ್ನಾಗಿ ಬೇಯಿಸಿ. ಎಣ್ಣೆಯಿಂದ ತೆಗೆದು ಪೇಪರ್ ಟವಲ್ ಮೇಲೆ ಹಾಕಿ. ರುಚಿರುಚಿಯಾದ ಬದನೆಕಾಯಿ ಬಜ್ಜಿ ತಯಾರ್. ಇದನ್ನು ಬಿಸಿಯಾಗಿ ತಿಂದರೆ ತುಂಬಾ ಚೆನ್ನಾಗಿ ಇರುತ್ತದೆ. ಬೇಕಾದರೆ ಚಟ್ನಿಯೊಂದಿಗೆ ಸರ್ವ್ ಮಾಡಬಹುದು.



## ಪದಬಂಧ ರಾಯಣ



**ಎಡದಿಂದ ಬಲಕ್ಕೆ:**
1. ಯಾವುದರ ಮೇಲೋ ಹಂಬಲ (2)
5. ಶೇಷಕ್ಕೆ ಮತ್ತೊಂದು ಹೆಸರು (2)
6. ಶ್ರೀರಾಮನೊಂದಿಗೆ ವನವಾಸಕ್ಕೆ ಹೋದ ಸಹೋದರ (3)
7. ಗಟ್ಟಿಯಾಗಿ ನೆಲೆನಿಲ್ಲು (4)
9. ಗುಣತ್ರಯಗಳಲ್ಲಿ ಒಂದು (4)
11. ತಪ್ಪಿಸಿಕೊಳ್ಳುವಿಕೆ ದಿಕ್ಕುತಪ್ಪಿಸಿ ಬಂದಿದೆ (4)
14. ಕೂಡುವ ಲೆಕ್ಕ (4)
16. ಹಳೆಯ ಚಿತ್ರನಟಿಯೊಬ್ಬಳ ಹೆಸರು (3)
17. ಹಣ, ಸಂಪತ್ತು (2)
18. ಬಟ್ಟೆ ತಯಾರಿಸಲು ಬೇಕಾಗುವ ಹಗುರವಾದ ವಸ್ತು (2)

**ಮೇಲಿನಿಂದ ಕೆಳಕ್ಕೆ:**
2. ಕಾರಾಗೃಹಕ್ಕೆ ಪರ್ಯಾಯ ಪದ (4)
3. ತಡಕಾಡುವಾಗ ಕಾಣಿಸಿದ ಪ್ರಸಿದ್ಧ ಸ್ಥಳ (4)
4. ಸಾಕಷ್ಟು ಸಂಪತ್ತಿರುವಾತ (4)
5. ಇದು ಒಟ್ಟು ಹಣ (4)
8. ಬೆಕ್ಕಿನ ಪರ್ಯಾಯ ಪದ ಕೊನೆಗೆ ದೀರ್ಘವಾಗಿದೆ (3)
10. ಗಣಪನ ಪ್ರಿಯ ತಿನಿಸು (3)
12. ಕರಾವಳಿಯ ಪ್ರಸಿದ್ಧ ಕಲೆ (4)
13. ಇದು ಆಳತೆಯ ಪ್ರಮಾಣ (4)
14. ಸತ್ತವರನ್ನು ಬದುಕಿಸುವುದೆಂದು ನಂಬಲಾದ ಸಸ್ಯ (4)
15. ಹೂವಿನ ಮಂಟಪ (4)

**ನಿನ್ನೆಯ ಉತ್ತರ**
ಎಡದಿಂದ ಬಲಕ್ಕೆ: 2. ನಿರೂಪ 5. ಖಾರ 6. ನಗು 7. ಪರಿಕರ 8. ಪಯಣಿಗ 10. ಗದಾಧರ 13. ಅವಯವ 15. ಸ್ವಾದ 16. ದೂರು 17. ಗರ್ನಾಲು
ಮೇಲಿನಿಂದ ಕೆಳಕ್ಕೆ: 1. ತರಕಾರಿ 2. ನಿರಕ್ಷರ 3. ಪರಿತಾಪ 4. ದಿನಮಣಿ 7. ಪರಾಗ 9. ಗರುವ 11. ದಾಮೋದರ 12. ರಣರಂಗ 13. ಅಹವಾಲು 14. ಯಮದೂತ

● ರವಿಶಂಕರ ಶಾಸ್ತ್ರಿ, ದಂಬೆ

## ಮಾಡುವ, ಮಾಡದ ನಡುವೆ ಇರುವ ಈ ಪ್ರಯತ್ನ

### ಒಂದೊಳ್ಳೆ ಮಾತು



ರೂಪಾ ಗುರುರಾಜ್

ಝೆನ್ ಮಾಸ್ಟರ್ ತನ್ನ ಕರವಸ್ತ್ರವನ್ನ ಕೆಳಗೆ ಬೀಳಿಸಿ, ಅಲ್ಲೇ ಕುಳಿತಿದ್ದ ತಮ್ಮ ಶಿಷ್ಯನಿಗೆ ಆದೇಶ ನೀಡಿದರು, ಆ ಕರವಸ್ತ್ರವನ್ನು ಎತ್ತಿಕೊಳ್ಳುವ ಪ್ರಯತ್ನ ಮಾಡು ಮಾಸ್ಟರ್ ಆದೇಶ ನೀಡುತ್ತಿದ್ದಂತೆಯೇ ಶಿಷ್ಯ ಕೂಡಲೇ ಕೆಳಗೆ ಬಗ್ಗಿ ಆ ಕರವಸ್ತ್ರವನ್ನು ಎತ್ತಿ ಮಾಸ್ಟರ್ ಕೈಗೆ ಕೊಟ್ಟ. ಆದರೆ ಮಾಸ್ಟರ್‌ಗೆ ಶಿಷ್ಯನ ಕೆಲಸದಿಂದ ಖುಷಿ ಆಗಲಿಲ್ಲ. ಮಾಸ್ಟರ್ ಇನ್ನೊಮ್ಮೆ ತಮ್ಮ ಕರವಸ್ತ್ರವನ್ನ ನೆಲಕ್ಕೆ ಬೀಳಿಸಿದರು. ಮತ್ತೊಮ್ಮೆ ತಮ್ಮ ಶಿಷ್ಯನಿಗೆ ಆದೇಶ ನೀಡಿದರು, ನನ್ನ ಮಾತನ್ನ ಲಕ್ಷ್ಯಗೊಟ್ಟು ಕೇಳು, ಆ ಕರವಸ್ತ್ರವನ್ನ ಎತ್ತಿಕೊಳ್ಳುವ ಪ್ರಯತ್ನ ಮಾಡು. ತಕ್ಷಣ ಶಿಷ್ಯ ಆ ಕರವಸ್ತ್ರವನ್ನ ಎತ್ತಿ ಮಾಸ್ಟರ್ ಕೈಗಿಟ್ಟ. ಮಾಸ್ಟರ್‌ಗೆ ಮತ್ತೆ ಸಿಟ್ಟು ಬಂತು, ಮತ್ತೆ ಕರವಸ್ತ್ರವನ್ನು ಕೆಳಗೆ ಬೀಳಿಸಿ ತಮ್ಮ ಶಿಷ್ಯನಿಗೆ ಅದೇ ಆದೇಶ ನೀಡಿದರು. ಮತ್ತೆ ಶಿಷ್ಯ ಮೊದಲಿನ ಹಾಗೆಯೇ ವರ್ತಿಸಿದ. ಹೀಗೇ ಈ ಪ್ರಕ್ರಿಯೆ ಆರು ಬಾರಿ ಮರುಕಳಿಸಿತು. ಏಳನೇ ಬಾರಿ ಮಾಸ್ಟರ್ ಕರವಸ್ತ್ರ ಕೆಳಗೆ ಎಸೆದಾಗ, ಶಿಷ್ಯನಿಗೆ ಸಂಶಯ ಬಂತು, ಮಾಸ್ಟರ್ ಯಾವುದೋ ಅಸಂಗತವನ್ನ ಹೇಳುತ್ತಿದ್ದಾರೆ ತನಗೆ ಯಾವುದೋ ಕೋಆನ್ (koan)ದ ಅರ್ಥ ಕಲಿಸುತ್ತಿದ್ದಾರೆ ಎನ್ನುವುದು ಗೊತ್ತಾಯಿತು.

ಕರವಸ್ತ್ರ ಎತ್ತಿಕೊಳ್ಳುವ ಪ್ರಯತ್ನ ಮಾಡು ಕರವಸ್ತ್ರವನ್ನ ಎತ್ತಿಕೊಳ್ಳುವ ಪ್ರಯತ್ನ ಮಾಡುವುದು ಹೇಗೆ ? ನೀವು ಆ ಕರವಸ್ತ್ರವನ್ನ ಎತ್ತಿಕೊಳ್ಳಬಹುದು ಅಥವಾ ಎತ್ತಿಕೊಳ್ಳದೇ ಇರಬಹುದು ಆದರೆ ಎತ್ತಿಕೊಳ್ಳುವ ಪ್ರಯತ್ನ ಮಾಡುವುದೆಂದರೇನು? ಆಗ ಶಿಷ್ಯನಿಗೆ ಮಾಸ್ಟರ್ ತನಗೆ ಏನು ಕಲಿಸುತ್ತಿದ್ದಾರೆ ಎನ್ನುವುದು ಥಟ್ಟನೇ ಹೊಳೆಯಿತು. ಪ್ರಯತ್ನ ಮಾಡವುದು ಸಾಧ್ಯವಿಲ್ಲ. ಒಂದು ಕೆಲಸ ಮಾಡಬಹುದು ಅಥವಾ ಮಾಡದಿರಬಹುದು, ಆದರೆ ಪ್ರಯತ್ನ ಮಾಡುವುದು ಸಾಧ್ಯವಿಲ್ಲ. ಶಿಷ್ಯ ಖುಷಿಯಿಂದ ಜೋರಾಗಿ ನಗುತ್ತ ಕುಣಿದಾಡಿಬಿಟ್ಟ. ನನಗೆ ಗೊತ್ತಾಯ್ತು ಮಾಸ್ಟರ್ ನಿಮ್ಮ ಮಾತಿನ ಅರ್ಥ ಎನ್ನುತ್ತ ಮಾಸ್ಟರ್‌ಗೆ ಬಾಗಿ ನಮನಗಳನ್ನು ಸಲ್ಲಿಸಿದ. ನೆನಪಿನಲ್ಲಿರಲಿ, ಯಾವತ್ತೂ ಪ್ರಯತ್ನ ಮಾಡಬೇಡ. ನೀನು ಮಾಡಬೇಕಿರುವ ಕೆಲಸವನ್ನ ಮಾಡು ಅಥವಾ ಮಾಡಲು ನಿರಾಕರಿಸು ಆದರೆ ಯಾವತ್ತೂ ಪ್ರಯತ್ನ ಮಾಡಬೇಡ. ಖಜಟ್ಟಿಟಿ ಜಿಠ್ಟಟ ಡಿಚಿಢ ಠಿಟ ಠಿಢ ಮಾಸ್ಟರ್ ಶಿಷ್ಯನ ತಲೆಯ ಮೇಲೆ ಮೊಟಕಿದರು.

ನಿಜವೇ ಅಲ್ಲವೇ ! ನಾವು ನಮ್ಮ ಜೀವನದಲ್ಲಿ ಅನೇಕ ವಿಷಯಗಳ ಬಗ್ಗೆ ಬರಿ ಪ್ರಯತ್ನಗಳನ್ನು ಮಾಡುತ್ತಿರುತ್ತೇವೆ. ಬೆಳಗ್ಗೆ ಬೇಗ ಏಳುವ ಪ್ರಯತ್ನ, ಸರಿಯಾದ ಸಮಯಕ್ಕೆ ಕಚೇರಿ ತಲುಪುವ ಪ್ರಯತ್ನ, ಕುಟುಂಬದೊಂದಿಗೆ ಸಮಯ ಕಳೆಯುವ ಪ್ರಯತ್ನ, ನಮ್ಮ ಗುರಿಗಳನ್ನು ಒಂದೊಂದಾಗಿ ತಲುಪುವ ಪ್ರಯತ್ನ ನಿಜವಾಗಲೂ ನಾವು ಮನಸ್ಸು ಮಾಡಿ ನಮ್ಮನ್ನು ನಾವು ಆಯೋಜಿಸಿಕೊಂಡರೆ ಒಂದೊಂದಾಗಿ ಈ ಪ್ರಯತ್ನಗಳೆಲ್ಲ ಸಾಕಾರಗೊಳ್ಳುವುದು.

ಪ್ರಯತ್ನ ಮತ್ತು ಮಾಡುವುದರ ನಡುವೆ ಇರುವ ಒಂದು ಸಣ್ಣ ವ್ಯತ್ಯಾಸ ಇಚ್ಛಾಶಕ್ತಿಯದ್ದು. ನಿಜವಾಗಿಯೂ ಬೆಳಗ್ಗೆ ಬೇಗ ಏಳಬೇಕಾಗಿರುವವರು ಗಡಿಯಾರ ಎಚ್ಚರಿಸುವ ಮುಂಚೆಯೇ ಕಣ್ಣು ಬಿಟ್ಟಿರುತ್ತಾರೆ. ನಮಗೆ ಯಾವುದು ಮುಖ್ಯ ಯಾವುದು ಅಲ್ಲ ಎನ್ನುವ ನಿರಂತರ ಪ್ರಜ್ಞೆ ನಮ್ಮಲ್ಲಿ ಜಾಗೃತವಾಗಿ ಇದ್ದಾಗ ನಾವು ನಮಗೆ ಬೇಕಾದ್ದನ್ನು ಆರಿಸಿಕೊಂಡು ಅದಕ್ಕಾಗಿ ಒಂದೊಂದೇ ಹೆಜ್ಜೆ ಮುಂದೆ ಸಾಗಬಹುದು. ಅನೇಕರು ನಮ್ಮನ್ನು ಅವರ ಮನೆಯ ಶುಭ ಸಮಾರಂಭಗಳಿಗೆ ಆಹ್ವಾನಿಸಿದಾಗ, ಬರಲು ಪ್ರಯತ್ನಿಸುವೆ ಎನ್ನುವ ಮಾತು ಈಗ ಮತ್ತೊಮ್ಮೆ ಯೋಚಿಸುವಂತೆ ಮಾಡುವುದಿಲ್ಲವೇ?

ಆ ಸಮಾರಂಭಕ್ಕೆ ನಾವು ಹೋಗಬಹುದು ಅಥವಾ ಹೋಗಲಾಗದು, ಹೋಗುವ ಪ್ರಯತ್ನ ಎಂಬುವ ಮಾತಿನಲ್ಲಿ ಅರ್ಥವೇ ಇಲ್ಲ ಅಲ್ಲವೇ? ಇನ್ನಾದರೂ ಜೀವನದಲ್ಲಿ ಪ್ರಯತ್ನಗಳಾಚೆ ಶ್ರಮಿಸಿ ನಮ್ಮ ಕನಸುಗಳನ್ನು ನನಸಾಗಿಸಿಕೊಳ್ಳೋಣ. ಆಗ ಕನಸುಗಳಿಗೂ ನನಸಿಗೂ ಜಾಸ್ತಿ ವ್ಯತ್ಯಾಸವಿರುವುದಿಲ್ಲ ಏನಂತೀರಿ?

## ಸಹಾಯವಾಣಿ ಸಂಖ್ಯೆ

ಮಹಿಳಾ ಸಹಾಯವಾಣಿ

**181**

## ಟ್ವೀಟ್ ಮೆಂಟ್

**ಸಂಜಯ ಗುಪಿತ್**

ಮಹಾರಾಷ್ಟ್ರದ ಮಹಾ ಅಘಡಿ ಸರಕಾರ ಪತನದ ಹಂತಕ್ಕೆ ಬಂದು ನಿಂತಿದೆ. ಮುಖ್ಯಮಂತ್ರಿ ಉದ್ಧವ್ ಠಾಕ್ರ ಅವರಿಗೆ ಈಗಲಾದರೂ ಬುದ್ಧಿ ಬಂದಿದ್ದರೆ ಬಾಯಿ ಮುಚ್ಚಿಕೊಂಡಿ ರಾಜೀನಾಮೆ ಕೊಟ್ಟು ಹೊರನಡಿಯಬೇಕು. ಓಡಿಸುವುದಕ್ಕಿಂತ ತಾವಾಗೇ ಹೊರಬಂದರೆ ಅದಕ್ಕೊಂದು ಮರ್ಯಾದೆಯಾದರೂ ಇರುತ್ತದೆ. ಅಲ್ಲವೇ?

## ಲವ್ ಎವರಿbody

ಗಾಳಿ ಸೇವಿಸಿಯೇ ತ್ರೇತಾಯುಗದ ಚಿರಂಜೀವಿ ಆಂಜನೇಯ ವರ್ಷಗಟ್ಟಲೇ ಬದುಕಿದ್ದನಂತೆ. ಹಾಗೆಯೇ ವನವಾಸದ ಸಂದರ್ಭದಲ್ಲಿ ಲಕ್ಷ್ಮಣ ಸತತ 12 ವರ್ಷ ಗಾಳಿಯೊಂದನ್ನೇ ಸೇವಿಸಿ ಬದುಕಿದ್ದನಂತೆ. ಆದರೆ ನಾವು ಪ್ರತಿ ದಿನ ಉಸಿರಾಡುವ ಗಾಳಿಯ ಪ್ರಮಾಣವೆಷ್ಟು ಗೊತ್ತೆ? 11,000 ಲೀಟರ್‌ಗಳಷ್ಟು.

● ದೇಹಾಭಿಮಾಣಿ

## ✓ ಖರೇನಾ/ಸುಳ್ಳಾ ✗

ಸುದ್ದಿಯೇನು? ವೆಬ್‌ಸೈಟ್ ಒಂದು ದೆಹಲಿ ಮೆಟ್ರೋ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನ ಮಾಡಿರುವುದಾಗಿ ಹೇಳಿಕೊಂಡು ಅಭ್ಯರ್ಥಿಗಳ ದಾಖಲಾತಿಗಳನ್ನು ಕೇಳುತ್ತಿದೆ.
ಸುದ್ದಿಮೂಲ: ಪಿ.ಐ.ಬಿ, ಫ್ಯಾಕ್ಟ್‌ಚೆಕ್.
ಸತ್ಯಾಂಶ: ಇದೊಂದು ಸುಳ್ಳು ಸುದ್ದಿಯಾಗಿದೆ. ದೆಹಲಿ ಮೆಟ್ರೋದ ಇಂಥ ಯಾವುದೇ ಅರ್ಜಿ ಆಹ್ವಾನಗಳಿದ್ದಲ್ಲಿ ಅದು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲೇ ಪ್ರಕಟಿಸುತ್ತದೆ.